# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಜಿ. ಕೃಷ್ಣಾರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪಾಳ್ಯಕೆರೆ ಗ್ರಾಮ ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧದ ನಡವಳಿ ಕುರಿತು– ಆದೇಶ.

**ಓದಲಾಗಿದೆ:** ಮಾನ್ಯ ನಿಬಂಧಕರು, ಮಾನ್ಯ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅ.ಸ.ಪ.ಸಂಖ್ಯೆ:D.O.No.Compt/BD/186/2016/DRE-1,ದಿ:30–05–2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ: 16–05–2017 ರವರ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀ ಎಲ್ ರಾಜಶೇಖರ್ ಬಿನ್ ವೆಂಕಟರಮಣಪ್ಪ, ಮಂಡ್ಯಂಪಲ್ಲಿ ಗ್ರಾಮ, ಪಾಳ್ಯಕೆರೆ ಅಂಚೆ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ ಜಿ. ಕೃಷ್ಣಾರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪಾಳ್ಯಕೆರೆ ಗ್ರಾಮ ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ ಎಂದು ತಿಳಿಸಿರುತ್ತಾರೆ.

**ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಗ್ರಾಮಪಂಚಾಯತಿಯ 2014–15 ಸಾಲಿನ 13ನೇ ಹಣಕಾಸು ಯೋಜನೆಯ ಶೇ.25 ರ ಎಸ್.ಸಿ./ಎಸ್.ಟಿ. ಅನುದಾನದಲ್ಲಿ ಗ್ರಾಮದ ಶೇ.22.75% ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಮೀಸಲಿಟ್ಟ ಅನುದಾನದಲ್ಲಿ ಪ್ರೋತ್ಸಾಹ ಧನಸಹಾಯ ನೀಡುವಂತೆ ದಿ.16/11/13 ರಂದು ಬಾಗೇಪಲ್ಲಿ ತಾಲ್ಲೂಕು, ಚೇಳೂರು ಹೋಬಳಿ, ಪಾಳ್ಯಕೆರೆ ಗ್ರಾಮಪಂಚಾಯತಿಯಲ್ಲಿ ಅರ್ಜಿ ಹಾಕಿರುತ್ತೇನೆ. ಮೂರು ತಿಂಗಳ ನಂತರ ಗ್ರಾಮಪಂಚಾಯತಿಯ ಪಿ.ಡಿ.ಓ.ರವರಿಗೆ ಧನಸಹಾಯ ಬಗ್ಗೆ ಫೋನ್ ಮಾಡಿದಾಗ ನಿಮ್ಮ ಮಾರ್ಕ್ಸ್ ಕಾರ್ಡ್ ಇಲ್ಲ, ಫೀ ರಸೀತಿ ಇಲ್ಲ ಮತ್ತು ಸರ್ಟಿಫಿಕೇಟ್ ಇಲ್ಲವೆಂದು ಬೆಂಗಳೂರಿನಿಂದ 4–6 ಬಾರಿ ಸುತ್ತಾಡಿಸಿ ನಂತರ 6 ತಿಂಗಳು ಬಿಟ್ಟು ಫೋನ್ ಮಾಡಿದಾಗ ಗ್ರಾಮಪಂಚಾಯತಿಯಲ್ಲಿ ಇನ್ನೂ ಸಭೆ ಮಾಡಿಲ್ಲ, ನೀನು ಕೊಟ್ಟಿರುವ ಪತ್ರಗಳು ಕಳೆದು ಹೋಗಿವೆ, ಇನ್ನೊಮ್ಮೆ ಕೊಟ್ಟರೆ ಸಭೆಯಲ್ಲಿಡುತ್ತೇನೆಂದು ಹೇಳಿದರು. ನಂತರ ಬೆಂಗಳೂರಿನಿಂದ ಗ್ರಾಮಪಂಚಾಯತಿಗೆ ಹೋದಾಗ, ಎದುರುದಾರರು ದೂರುದಾರರನ್ನು ಕಾಯಿಸಿ ಬೇರೆ ಬೇರೆ ಕಡೆ ಬರುವಂತೆ ಹೇಳಿ ಭೇಟಿಗೆ ಸಿಕ್ಕಿರುವುದಿಲ್ಲ. ನಂತರ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು ಮತ್ತು ಫಲಾನುಭವಿಗಳು ಯಾರು ಎಂದು ವಿವರಣೆ ನೀಡುವಂತೆ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಹಾಕಿದ್ದು, ಸದರಿ ಅಜಿಯ ಬಗ್ಗೆ ಜೆರಾಕ್ಸ್‌ಗಾಗಿ ರೂ.600/– ಗಳನ್ನು ಗ್ರಾಮಪಂಚಾಯತಿಗೆ ಸಂದಾಯ ಮಾಡಿ ಪಡೆಯಬಹುದೆಂದು ತಿಳಿಸಿದಾಗ, ದೂರುದಾರರು ಗ್ರಾಮಪಂಚಾಯತಿಯಲ್ಲಿ ವಿಚಾರಿಸಿದ್ದು, ಆಗ ಕ್ಷಮಿಸಿ ನಾನು ನಿಮ್ಮ ಅರ್ಜಿಯನ್ನು ಸರಿಯಾಗಿ ನೋಡಿಲ್ಲ ನಿಮಗೆ ಉಚಿತವಾಗಿ ಮಾಹಿತಿ ನೀಡುತ್ತೇನೆಂದು ತಿಳಿಸಿದರು. ನಂತರ ಪಂಚಾಯತ್ ಅಧ್ಯಕ್ಷರು ನಿನಗೆ ರೂ.10,000/– ಕೊಡುತ್ತೇನೆ ಆದರೆ ಮಾಹಿತಿ ಕೇಳಬೇಡವೆಂದು ಹಣದ ಆಮಿಷ ತೋರಿಸಿದರು. ಮಾಹಿತಿ ನೀಡದೇ ಇರುವ ಕಾರಣ ಮೆಲ್ಮನವಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನತರ ದಿ.12/11/14 ರಂದು ಎದುರುದಾರರು ಯಾವುದೇ ಸಭೆ ಮಾಡದೆ ಪ್ರಗತಿ ಗ್ರಾಮೀಣ ಬ್ಯಾಂಕಿನ ಚೆಕ್ ನಂ.567759 ನ್ನು ರೂ.5,000/– ಕ್ಕೆ ನನಗೆ ನೀಡಿದ್ದು, ಅದರ ಫೋಟೋ ತೆಗೆದು ಚೆಕ್ಕನ್ನು ವಾಪಸ್ ನೀಡಿರುತ್ತಾರೆ. ನಂತರ ಎದುರುದಾರರು ಚೆಕ್ಕನ್ನು ನನ್ನ ಮಾವನ ಕೈಗೆ ನೀಡಿದ್ದು, ಅದನ್ನು ದಿ15/12/14 ರಂದು ಬ್ಯಾಂಕಿಗೆ ಹಾಜರು ಪಡಿಸಿದಾಗ, ಅದು ಅಮಾನ್ಯಗೊಂಡಿರುವ ಬಗ್ಗೆ ಸಂದೇಶ ಬಂದಿರುತ್ತದೆ. ಆದ್ದರಿಂದ ಗ್ರಾಮಪಂಚಾಯತಿಯ ಅವ್ಯವಹಾರದ ಬಗ್ಗೆ ಸೂಕ್ತ ತನಿಖೆ ನಡೆಸಬೇಕೆಂದು ಕೇಳಿಕೊಂಡಿರುತ್ತಾರೆ.

ಎದುರುದಾರರ ದೂರಿನ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ತನ್ನ ಆಕ್ಷೇಪಣೆಯಲ್ಲಿ ಅರ್ಜಿದಾರರು ಉನ್ನತ ಶಿಕ್ಷಣಕ್ಕಾಗಿ ಪಂಚಾಯತಿಯಿಂದ ಪ್ರೋತ್ಸಾಹಧನ ನೀಡುವಂತೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿ ಪ್ರಕಾರ ದಿ.12/11/14 ರಂದು ಅಕೌಂಟ್ ಪೇಯಿ ಚೆಕ್ ನಂ.567759 ರಂತೆ ರೂ.5,000/– ಗಳನ್ನು ನೀಡಿರುತ್ತಾರೆ. ಆ ಹಣವನ್ನು ಸದರಿಯವರು ಡ್ರಾ ಮಾಡಿಕೊಳ್ಳದೆ ಅವರ ಮಾವನಾದ ರಂಗಸ್ವಾಮಿಯವರಿಗೆ ಚೆಕ್ಕನ್ನು ಬ್ಯಾಂಕಿಗೆ ಎತ್ತಿಕೊಂಡು ಹೋಗಿ ಹಣ ಡ್ರಾ ಮಾಡಿಕೊಂಡು ಬರುವಂತೆ ಹೇಳಿರುತ್ತಾರೆ. ಅವರ ಮಾವ ಆ ಚೆಕ್ಕನ್ನು

ಬ್ಯಾಂಕಿಗೆ ಎತ್ತಿಕೊಂಡು ಹೋಗಿ ಹಣ ಡ್ರಾ ಮಾಡಲು ಬ್ಯಾಂಕಿಗೆ ನೀಡಿದಾಗ ಬ್ಯಾಂಕ್‌ನವರು ಆ ಚೆಕ್ ಅಕೌಂಟ್ ಪೇಯಿ ಚೆಕ್ ಆಗಿರುತ್ತದೆ. ಚೆಕ್ ಡ್ರಾ ಮಾಡಲು ರಾಜಶೇಖರ್‌ರವರು ಬರಬೇಕೆಂದು ಹೇಳಿ ವಾಪಾಸ್ ಕಳುಹಿಸಿರುತ್ತಾರೆ. ನಂತರ ರಾಜಶೇಖರ್ ನಿಗದಿತ ಸಮಯದೊಳಗೆ ಚೆಕ್ ಹಣ ಡ್ರಾ ಮಾಡಿಕೊಳ್ಳದೆ ತನ್ನ ಖಾತೆಗೆ ಹಾಕಿಕೊಂಡು ಚೆಕ್ ಅವದಿ ಮುಗಿದ ನಂತರ ಬ್ಯಾಂಕಿನಲ್ಲಿ ಸಲ್ಲಿಸಿರುತ್ತಾರೆ. ಬ್ಯಾಂಕಿನವರು ಚೆಕ್‌ನ್ನು ವಾಪಾಸ್ ಕಳುಹಿಸುತ್ತಾರೆ. ತದನಂತರ ಅರ್ಜಿದಾರರು ಊರಿನಲ್ಲಿದ್ದಾಗ ಅವರ ಮನೆಗೆ ಹೋಗಿ ರೂ.5000/– ನಗದನ್ನು ಉನ್ನತ ವಿದ್ಯಾಬ್ಯಾಸಕ್ಕಾಗಿ ಸಹಾಯಧನ ನೀಡಿರುತ್ತಾರೆ. ಆ ದೂರಿನ ಬಗ್ಗೆ ಸದರಿ ಅರ್ಜಿದಾರರು ಮಾಹಿತಿ ಹಕ್ಕು ಅಧಿನಿಯಮ 2005 ರಡಿ ಮಾಹಿತಿಯನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆ ಬಗ್ಗೆ ಮಾನ್ಯ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಇವರ ಸಮಕ್ಷಮದಲ್ಲಿ ಮಾಹಿತಿಯನ್ನು ನೀಡಿರುತ್ತಾರೆ. ನಂತರ ಅವರ ಪ್ರಕರಣ ಸಂ.ಕೆಐಸಿ/12447/ಎಪಿಎಲ್/2014, ದಿ:06/05/2016 ರಂದು ವಿಚಾರಣೆ ನಡೆಸಿ ಪ್ರಕರಣವನ್ನು ವಜಾ ಮಾಡಿರುತ್ತಾರೆಂದು ಹೇಳಿರುತ್ತಾರೆ.

ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ರದಲ್ಲಿ ಎದುರುದಾರರು ನೀಡಿರುವ ಆಕ್ಷೇಪಣೆಯು ಸುಳ್ಳಾಗಿರುತ್ತದೆ. ಕಛೇರಿಯ ವ್ಯವಸ್ಥಾಪಕ ಪರಿಶೀಲನಾ ವರದಿಯಲ್ಲಿ ಎದುರದಾರರು ಉನ್ನತ ವಿದ್ಯಾಬ್ಯಾಸಕ್ಕಾಗಿ ಅನುದಾನ ಬರುವುದಿಲ್ಲ ಮತ್ತು ಕ್ರೀಯಾ ಯೋಜನೆಯಲ್ಲಿ ಮೀಸಲಿಟ್ಟಿರುವುದಿಲ್ಲವೆಂದು ಎದುರುದಾರರು ಹೇಳಿಕೆಗಳನ್ನು ನೀಡಲಾಗಿದೆ. ದೂರುದಾರರ ಅರ್ಜಿಯನ್ನು ಪರಿಗಣಿಸದೆ ಬೇರೆಯವರಿಗೆ ಸಹಾಯಧನ ನೀಡಲಾಗಿದೆ. ಚೆಕ್‌ನ್ನು ಬ್ಯಾಂಕ್‌ಗೆ ಹಾಕದೆ 3 ತಿಂಗಳ ಅವಧಿ ಮುಗಿಯುವವರೆಗೂ ದೂರುದಾರರ ಬಳಿ ಇಟ್ಟುಕೊಂಡು ನಂತರ ಬ್ಯಾಂಕ್‌ಗೆ ನೀಡಲಾಗಿದೆಯೆಂದು ಸುಳ್ಳು ಹೇಳಿಕೆ ನೀಡಲಾಗಿದೆ. ಎದುರುದಾರರು ನಾನೇ ಗ್ರಾಮ ಪಂಚಾಯತಿಯಿಂದ ಲ್ಯಾಪ್‌ಟಾಪ್‌ಗೆ ಆಗುವ ಹಣವನ್ನು ನೀಡುತ್ತೇನೆ. ಲ್ಯಾಪ್‌ಟ್ಯಾಪ್ ಬಿಲ್ ತೆಗೆದುಕೊಂಡು ಬಾ ಎಂಬ ಹೇಳಿಕೆಯನ್ನು ನೀಡಿದ್ದಾರೆ. ನಂತರ ಲ್ಯಾಪ್‌ಟಾಪ್‌ಗೆ ಹಣ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದರು. ರೂ.35,000/– ಸಾಲದ ಕಷ್ಟಕ್ಕೆ ಸಿಲುಕಿಸಿ ವಿದ್ಯಾಭ್ಯಾಸಕ್ಕಾಗಿ ಹಿನ್ನಡೆ ಮತ್ತು ತೊಂದರೆಯನ್ನುಂಟು ಮಾಡಿರುತ್ತಾರೆಂದು ಹೇಳಿರುತ್ತಾರೆ.

ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರುದಾರರ ಉನ್ನತ ವಿದ್ಯಾಬ್ಯಾಸಕ್ಕಾಗಿ ರೂ.5,000/– ದ ಚೆಕ್‌ನ್ನು ನೀಡಲಾಗಿತ್ತು. ಆದರೆ ದೂರುದಾರರು ಅದನ್ನು ನಿಗದಿತ ಸಮಯದಲ್ಲಿ ನಗದೀಕರಿಸಿಕೊಂಡಲ್ಲವೆಂದು ಹೇಳುತ್ತಾರೆ. ಆದರೆ, ದೂರುದಾರರು ತನ್ನ ಪ್ರತ್ಯುತ್ತರದಲ್ಲಿ ಎದುರುದಾರರು ಆ ರೀತಿಯ ಯಾವುದೇ ಚೆಕ್ಕನ್ನು ಅವರಿಗೆ ನೀಡಿಲ್ಲ. ಎದುರುದಾರರು ನೀಡಿರುವ ಸ್ಪಷ್ಟನೆ ಸತ್ಯಕ್ಕೆ ದೂರವಾಗಿರುತ್ತದೆಯೆಂದು ಹೇಳಿರುತ್ತಾರೆ. ಅದೇ ರೀತಿ ಉನ್ನತ ವಿದ್ಯಾಬ್ಯಾಸಕ್ಕೆ ಯಾವುದೇ ಸಹಾಯದನವಿಲ್ಲದೆ ತಿಳಿಸಿ ಬೇರೆಯವರಿಗೆ ಸಹಾಯಧನವನ್ನು ಮಂಜೂರು ಮಾಡಲಾಗಿದೆಯೆಂದು ದೂರುದಾರರು ಹೇಳಿರುವುದು ಕಂಡುಬರುತ್ತದೆ. ಆದ್ದರಿಂದ, ಸದರಿ ವಿಚಾರಗಳ ಬಗ್ಗೆ ಕೂಲಂಕಷವಾದ ವಿಚಾರಣೆ ನಡೆಸಿ ಮಾಹಿತಿಯನ್ನು ಪಡೆಯುವುದು ಅವಶ್ಯವಿದೆಯೆಂದು ಕಂಡುಬಂದ ಕಾರಣ, ದೂರುದಾರರ ದೂರು ಹಾಗೂ ಪ್ರತ್ಯುತ್ತರವನ್ನು ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಇವರಿಗೆ ಕಳುಹಿಸಿ ವಿಚಾರಣೆ ನಡೆಸಿವರದಿ ಸಲ್ಲಿಸುವಂತೆ ಆದೇಶಿಸಲಾಗಿತ್ತು.

ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ "ಪಾಳ್ಯಕೆರೆ ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿದ್ದ ಕೃಷ್ಣಾರೆಡ್ಡಿಯವರು2014–15ನೇ ಸಾಲಿನ 13ನೇ ಹಣಕಾಸು ಯೋಜನೆಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಶೇ.25 ರಲ್ಲಿ ರೂ.10,000/– ಗಳನ್ನು ಎಸ್.ಸಿ/ಎಸಿ.ಟಿ ವಿದ್ಯಾರ್ಥಿಗಳ ಉನ್ನತ ವಿದ್ಯಾಬ್ಯಾಸಕ್ಕಾಗಿ ಮೀಸಲಿಟ್ಟಿದ್ದರೂ ಸದರಿ ಅನುದಾನದಲ್ಲಿ ಅರ್ಜಿದಾರರ ಎಲ್ ರಾಜಶೇಖರವರಿಗೆ ಹಣದ ಚೆಕ್ಕನ್ನು ನೀಡುವಲ್ಲಿ ವಿಳಂಬ ನೀಡಿ ಅನುಸರಿಸಿ ತಡವಾಗಿ ರೂ.5,000/– ಗಳ ಚೆಕ್‌ನ್ನು ನೀಡಿದ್ದರೂ ಸಹ ಆ ಖಾತೆಯಲ್ಲಿ ಹಣವಿಲ್ಲದೆ ಚೆಕ್ ಬೌನ್ಸ್ ಆಗಿದ್ದು, ಇದರಿಂದ ಅರ್ಜಿದಾರರಿಗೆ ತೊಂದರೆಯಾಗಿರುವುದು ದೃಢಪಟ್ಟಿರುತ್ತದೆ. ಅರ್ಜಿದಾರರು ಲೋಕಾಯುಕ್ತಕ್ಕೂ, ಮಾಹಿತಿ ಆಯೋಗಕ್ಕೂ ದೂರು ನೀಡಿದ್ದರಿಂದ ಪಿಡಿಓ ಕೃಷ್ಣಾರೆಡ್ಡಿ ರವರು ತಮ್ಮ ಸ್ವಂತ ಹಣವಾದ ರೂ.7,000/– ಗಳನ್ನು ಅರ್ಜಿದಾರರಿಗೆ ನೀಡಿರುತ್ತಾರೆ ಹಾಗೂ ಅರ್ಜಿದಾರರು ತಮ್ಮ ಹೇಳಿಕೆಯಲ್ಲಿ ತಾನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಪಡೆಯುತ್ತಿದ್ದು, ನ್ಯಾಯಾಲಯಗಳಿಗೆ ಹಾಜರಾಗಲು ತೊಂದರೆಯಾಗುವುದರಿಂದ ಮತ್ತು ಎದುರು ಅರ್ಜಿದಾರರು ತನಗೆ ರೂ.7,000/– ಗಳನ್ನು ಅರ್ಜಿದಾರರಿಗೆ ನೀಡಿರುತ್ತಾರೆ. ಹಾಗೂ ಅರ್ಜಿದಾರರು ತಮ,ಮ ಹೇಳಿಕೆಯಲ್ಲಿ ತಾನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಪಡೆಯುತ್ತಿದ್ದು, ನ್ಯಾಯಾಲಯಗಳಿಗೆ ಹಾಜರಾಗಲು ತೊಂದರೆಯಾಗುವುದರಿಂದ ಮತ್ತು ಎದುರು ಅರ್ಜಿದಾರರು ತನಗೆ ರೂ.7,000/– ಗಳನ್ನು ನೀಡಿರುವುದರಿಂದ ವಿಚಾರಣೆ ಮುಂದುವರೆಸಬಾರದೆಂದು ಹೇಳಿಕೆಯನ್ನು ನೀಡಿರುತ್ತಾರೆ. ಈ ವಿಚಾರಣೆಯಿಂದ ಪಿಡಿಓ ಕೃಷ್ಣಾರೆಡ್ಡಿ ರವರು ಶೇ.25 ಅನುದಾನದಲ್ಲಿ ಪ್ರೋತ್ಸಾಹ ಧನವನ್ನು ಮಂಜೂರು ಮಾಡಲು ತೊಂದರೆ ನೀಡಿರುವುದು ದೃಢಪಟ್ಟರೂ ಸಹ ಅರ್ಜಿದಾರರು ಪ್ರಕರಣವನ್ನು ಮುಂದುವರೆಸಲು ಇಚ್ಛಿಸುತ್ತಿಲ್ಲವಾದ ಕಾರಣ ಸೂಕ್ತ ಕ್ರಮ ಕೈಗೊಳ್ಳಲು ವರದಿಯನ್ನು ಸಲ್ಲಿಸಿಕೊಂಡಿರುತ್ತೆ" ಎಂದು ವರದಿಯನ್ನು ನೀಡಿರುತ್ತಾರೆ.

ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ ಎದುರುದಾರರು 2014-15ನೇ ಸಾಲಿನ 13ನೇ ಹಣಕಾಸು ಯೋಜನೆಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ರೂ.10,000/- ಗಳನ್ನು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಮೀಸಲಿಟ್ಟರೂ ಸಹ ಸದರಿ ಅನುದಾನದಲ್ಲಿ ದೂರುದಾರರಿಗೆ ಚೆಕ್‌ನ್ನು ನೀಡುವಲ್ಲಿ ವಿಳಂಬ ನೀತಿ ಅನುಸರಿಸಿ ತಡವಾಗಿ ರೂ.5,000/- ಗಳ ಚೆಕ್‌ನ್ನು ನೀಡಿದರೂ ಸಹ ಖಾತೆಯಲ್ಲಿ ಹಣವಿಲ್ಲದೆ ಚೆಕ್ ಬೌನ್ಸ್ ಆಗಿರುವುದು ಕಂಡುಬಂದಿರುತ್ತದೆಯೆಂದು ವರದಿಯಲ್ಲಿ ತಿಳಿಸಿದ್ದು, ಅದನ್ನು ಪರಿಶೀಲಿಸಿದಾಗ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆ ಕಾರಣದಿಂದಾಗಿ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

ಆದುದರಿಂದ ಎದುರುದಾರರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಮತ್ತು ದೂರುದಾರರ ದೂರನ್ನು ಅಲ್ಲಗಳೆಯಲು ಯಾವುದೇ ಸಮಂಜಸ/ಸಮರ್ಪಕ ಉತ್ತರವನ್ನು ತಮ್ಮ ಆಕ್ಷೇಪಣೆಯಲ್ಲಿ ನೀಡಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ.

ಆದ್ದರಿಂದ ಶ್ರೀ ಜಿ. ಕೃಷ್ಣಾರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪಾಳ್ಯಕೆರೆ ಗ್ರಾಮ ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಾದ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಮದ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966 ರ ನಿಯಮಗಳು 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುವುದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಜಿ. ಕೃಷ್ಣಾರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪಾಳ್ಯಕೆರೆ ಗ್ರಾಮ ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/501/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 15-06-2017.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಜಿ. ಕೃಷ್ಣಾರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪಾಳ್ಯಕೆರೆ ಗ್ರಾಮ ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ 14 (ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಇವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ಪಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 83 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಬಳ್ಳಾಪುರ ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
6) ಶ್ರೀ ಜಿ. ಕೃಷ್ಣಾರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪಾಳ್ಯಕೆರೆ ಗ್ರಾಮ ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
7) ಗಣಕ ಕೋಶ–ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.